**DREAM WORLD SCHOOL, BALLARI, KARNATAKA**

*'The School that Learns'*

**ತರಗತಿ: ೫**

## ಸಾರಾಂಶಿಕರಿಸುವುದು

**ಪೀಠಿಕೆ:**

ವಿದ್ಯಾರ್ಥಿ ಓದಿದ್ದನ್ನು ಗ್ರಹಿಸುವುದು ಮತ್ತು ಅದನ್ನು ಬರವಣಿಗೆಯಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸುವುದು ಅತಿ ಮುಖ್ಯವಾಗಿರುತ್ತದೆ. ಹೀಗೆ ಗ್ರಹಿಸುವಲ್ಲಿ, ವ್ಯಕ್ತಪಡಿಸುವಲ್ಲಿ, ಅರ್ಥವತ್ತಾದ ಪದಗಳ ಪರಿಚಯ ಮಾಡಿಕೊಳ್ಳುವ ಅವಶ್ಯಕತೆ ಇದೆ. ಓದಿದ್ದನ್ನು ನಿಗಧಿತ ಪದಗಳಲ್ಲಿ ಅರ್ಥಸಹಿತವಾಗಿ ಸ್ಪಷ್ಟಪಡಿಸಬೇಕಾಗಿರುವ ಕಲೆಯನ್ನು ತಿಳಿಯುವುದರ ಅವಶ್ಯಕತೆ ಇದೆ. ಇದರಿಂದ ವಿದ್ಯಾರ್ಥಿಗಳ ವಿಷಯ ಗ್ರಹಿಕೆಯ ಸಾಮರ್ಥ್ಯ ಹೆಚ್ಚುತ್ತದೆ.

**ಅರ್ಥ:**

ಸಾರಾಂಶ ಎಂದರೆ ವಿಷಯದ ಮುಖ್ಯ ತಿರುಳು ಅಥವಾ ಸಾರವನ್ನು ಸಾಧ್ಯವಾದಷ್ಟೂ ಕೆಲವು ಪದಗಳಲ್ಲಿ ವ್ಯಕ್ತಪಡಿಸುವುದು. ಹಾಗೆ ವ್ಯಕ್ತಪಡಿಸುವಾಗ ವಿಷಯಕ್ಕೆ ಭಂಗಬಾರದಂತೆ ಅಗತ್ಯವಾದ ಎಲ್ಲ ಅಂಶಗಳನ್ನು ಒಳಗೊಂಡಿರುವಂತೆ ಬರೆಯಬೇಕು. ಇಷ್ಟೇ ದೀರ್ಘವಾಗಿರಬೇಕು ಎಂಬ ನಿಯಮವಿಲ್ಲದಿದ್ದರೂ ಮೂಲ ಪಠ್ಯಕ್ಕಿಂತ **ಮೂರನೇ ಒಂದು ಭಾಗದಷ್ಟಿರಬೇಕು.**

**ಸಾರಾಂಶ ಬರವಣಿಗೆಯಲ್ಲಿ ಅನುಸರಿಸಬೇಕಾದ ವಿಧಾನಗಳು/ ಹಂತಗಳು:**

೧. ಗಮನವಿಟ್ಟು ಓದುವುದರ ಜೊತೆಗೆ ಕಥಾದೃಷ್ಟಿಯಿಂದ ಮುಖ್ಯವಾದ ಅರ್ಥವನ್ನು ಗ್ರಹಿಸಬೇಕು.

೨. ಸಾಧ್ಯವಾದಷ್ಟು ಎಲ್ಲಾ ವಾಕ್ಯಗಳ, ಪದಗಳ ಅರ್ಥವನ್ನು ಗ್ರಹಿಸಲು ಪ್ರಯತ್ನಿಸಬೇಕು.

೩. ಪ್ರತಿಯೊಂದು ಆಕಲನ(paragraph) ದ ಮುಖ್ಯ ಅಂಶಗಳನ್ನು ಒಂದು/ಎರಡು ವಾಕ್ಯಗಳಲ್ಲಿ ಬರೆಯುವುದು.

೪. ಸೂಚಿಸಲಾಗಿರುವ ಪದಗಳ ಸಂಖ್ಯೆಗನುಗುಣವಾಗಿ ಸಂಕ್ಷಿಪ್ತವಾಗಿ ಮುಖ್ಯ ಅಂಶಗಳನ್ನು ಬರೆದಿಟ್ಟುಕೊಳ್ಳುವುದು.

೫. ಬರೆದಿಟ್ಟುಕೊಂಡ ಮುಖ್ಯ ಅಂಶಗಳು ಪುನರಾವರ್ತಿತವಾಗದಂತೆ ಕ್ರಮಬದ್ಧವಾಗಿ ಆಕಲನಗಳಲ್ಲಿ (paragraph) ಜೋಡಿಸಬೇಕು.

೬. ಬರೆಯುವ ವಿಷಯವು ಪೂರ್ಣಸಂದೇಶವನ್ನು ಕೊಡುವಂತಿದ್ದು, ಅರ್ಥವತ್ತಾಗಿರಬೇಕು.

೭. ಸಾರ ಅಥವಾ ತಿರುಳನ್ನು ವ್ಯಕ್ತಪಡಿಸುವುದರ ಜೊತೆಗೆ ಕ್ರಮಬದ್ಧವಾಗಿ ಓದುವಂತೆ ವಿಷಯ ಜೋಡಣೆಯಾಗಿರಬೇಕು.

೮. ಓದಿದ ಕಥೆಗೆ ಸರಿಹೊಂದುವಂತೆ ನಿಮ್ಮ ಅಭಿಪ್ರಾಯದಲ್ಲಿ ಶೀರ್ಷಿಕೆ ಬರೆಯಬೇಕು.

# ಶ್ರೀಕೃಷ್ಣ

| | |
|---|---|
| **ಸೆರೆಮನೆಯಿಂದ ನಂದಗೋಕುಲಕ್ಕೆ, ಗೋಕುಲದ ಜೀವ ಚೈತನ್ಯ** | • ದೇವಕಿ ಮತ್ತು ವಸುದೇವರ ಮಗನಾಗಿ ಜನನ.<br>• ದುಷ್ಟ ಕಂಸನ ಭಯದಿಂದ ವಸುದೇವ ಮಗುವನ್ನು ಗೋಕುಲದ ನಂದನ ಮನೆಯಲ್ಲಿ ಬಿಟ್ಟನು.<br>• ನಂದ ಮತ್ತು ಯಶೋದೆಯ ಮಗನಾಗಿ ಗೋಕುಲದಲ್ಲಿ ಬೆಳೆದ ಕೃಷ್ಣ ಹಾಲುಣಿಸಲು ಬಂದ ಪೂತನಿಯನ್ನು ಕೊಂದ. |
| **ಯಶೋದೆಯ ಕಂದ, ಗೋವರ್ಧನ ಗಿರಿ, ಕಂಸವಧೆ** | • ಯಶೋದೆ ಬಾಲಕೃಷ್ಣನನ್ನು ಮಣ್ಣು ತಿನ್ನುತ್ತೀಯ ಎಂದು ಗದರಿ ಬಾಯಿ ತೆಗೆಯಲು ಹೇಳಲು, ಬಾಯಲ್ಲಿ ಬ್ರಹ್ಮಾಂಡವನ್ನೆ ಕಂಡು ದಿಗ್ಭ್ರಮೆಗೊಂಡಳು.<br>• ಇಂದ್ರ ಕೋಪಗೊಂಡು ಗೋವರ್ಧನ ಗಿರಿಯ ಮೇಲೆ ಮಳೆ ಸುರಿಯಲು, ಬೆಟ್ಟವನ್ನೇ ಎತ್ತಿ ಜನರನ್ನು ಕಾಪಾಡಿದ.<br>• ಮಥುರೆಗೆ ಬಂದು ಕಂಸನನ್ನು ಕೊಂದು, ತಾತ ಉಗ್ರಸೇನನ್ನು ಸಿಂಹಾಸನದ ಮೇಲೆ ಕೂಡಿಸಿದ |
| **ಗುರುವಿನೆಡೆಗೆ, ದ್ವಾರಕೆಗೆ, ಸಾಹಸಿ ಕೃಷ್ಣ** | • ಸಾಂದೀಪನಿ ಮುನಿಯ ಬಳಿ ವಿದ್ಯಾಭ್ಯಾಸ. ಬಲರಾಮ ಮತ್ತು ಕುಚೇಲರು ಶ್ರೀಕೃಷ್ಣನ ಸಹಪಾಠಿಗಳಾಗಿದ್ದರು.<br>• ರುಕ್ಮಿಣಿಯೊಂದಿಗೆ ವಿವಾಹ.<br>• ಜನರನ್ನು ಹಿಂಸಿಸುತ್ತಿದ್ದ ನರಕಾಸುರನನ್ನು ವಧಿಸಿ, ನರಕ ಚತುರ್ದಶಿ ಆಚರಣೆ. |
| **ಪಾಂಡವರ ಭಾಗ್ಯ, ಪಾಂಡವ ರಾಯಭಾರಿ, ಯುದ್ಧಕ್ಕೆ ನಾಂದಿ, ಅರ್ಜುನಾ ಕರ್ತವ್ಯವನ್ನು ಮರೆಯಬೇಡ,** | • ಅಧರ್ಮಿಗಳ ನಾಶಕ್ಕಾಗಿ ಅರ್ಜುನನೊಡನೆ ಸ್ನೇಹ.<br>• ವನವಾಸದ ಸಮಯದಲ್ಲಿ ಅಸಹಾಯಕಳಾದ ದ್ರೌಪದಿಗೆ ಅಕ್ಷಯ ಪಾತ್ರೆಯನ್ನು ನೀಡಿ ಕಾಪಾಡಿದ.<br>• ಪಾಂಡವರ ರಾಯಭಾರಿಯಾಗಿ ಹೋದ ಕೃಷ್ಣ ಕೌರವರೊಡನೆ ಯುದ್ಧವನ್ನು ನಿಶ್ಚಯಿಸಿ ಬಂದನು.<br>• ಅರ್ಜುನ ತನ್ನ ಒಡನಾಡಿಗಳನ್ನು ಕಂಡು ಯುದ್ಧ ಬೇಡವೆಂದಾಗ, ಕೃಷ್ಣ ಕರ್ತವ್ಯ ನಿಷ್ಠೆಯ ಪಾಠ ಬೋಧಿಸಿದ. |
| **ಕುರುಕ್ಷೇತ್ರದ ಸೂತ್ರಧಾರ, ಕೃಷ್ಣಾವತಾರ ಮುಗಿಯಿತು, ಯೋಗೀಶ್ವರ ಕೃಷ್ಣ** | • ಹದಿನೆಂಟು ದಿನಗಳ ಕುರುಕ್ಷೇತ್ರ ಯುದ್ಧದಲ್ಲಿ ಕೌರವರೆಲ್ಲರು ಹತರಾಗಲು, ಕೊನೆಗೆ ಸರೋವರದಲ್ಲಿ ಅಡಗಿ ಕುಳಿತ ದುರ್ಯೋಧನನ್ನು ಹುಡುಕಿ ಭೀಮನಿಗೊಪ್ಪಿಸಿದ.<br>• ಕೃಷ್ಣ ಲೋಕವನ್ನು ಬಿಡಲು ನಿಶ್ಚಯಿಸಿ, ಮರದ ಕೆಳಗೆ ಮಲಗಿರಲು ಬೇಡನ ಬಾಣಕ್ಕೆ ಬಲಿಯಾದನು.<br>• ಶ್ರೀಕೃಷ್ಣ ಭಗವದ್ಗೀತೆಯ ಮೂಲಕ ಸಂಬಂಧಕ್ಕಿಂತಲೂ, ಕರ್ತವ್ಯ ಮುಖ್ಯ ಎಂಬುದನ್ನು ಸಾರಿ ಹೇಳಿ, ಧರ್ಮವನ್ನು ಕಾಪಾಡಿದನು. |

# ಶ್ರೀಕೃಷ್ಣ

**'ಯಥಾ ಯಥಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ತಾನಮಧರ್ಮಸ್ಯ ತದಾಸ್ಮಾನಂ ಸೃಜಾಮ್ಯಹಂ' ತಾತ್ಪರ್ಯ- ಜಗತ್ತು ಅಧರ್ಮದ ಹಾದಿ ಹಿಡಿದಾಗ ಅದನ್ನು ಧರ್ಮದೆಡೆ ನಡೆಸಲು ವಿಷ್ಣುವೇ ವಿವಿಧ ಅವತಾರಗಳಲ್ಲಿ ಜನಿಸಿದನು ಎನ್ನುವುದು ಹಿಂದೂ ಧರ್ಮಿಯರ ನಂಬಿಕೆಯಾಗಿದೆ. ಅವುಗಳಲ್ಲಿ ಒಂದು ಶ್ರೀಕೃಷ್ಣನ ಅವತಾರವಾಗಿದೆ. ಶ್ರೀಕೃಷ್ಣನು ದೇವಕಿ ಮತ್ತು ವಸುದೇವರ ಮಗನಾಗಿ ಸೆರೆಮನೆಯಲ್ಲಿ ಜನಿಸಿದನು.** ಕಾರಣ ಕಂಸ ತನ್ನ ತಂಗಿಯಾದ ದೇವಕಿಗೆ ಹುಟ್ಟುವ ಮಗುವಿನಿಂದಲೇ, ತನ್ನ ನಾಶ ಎಂದು ಅಶರೀರವಾಣಿ ಸಂದೇಶವನ್ನು ಕೇಳಿ ದೇವಕಿ ಮತ್ತು ವಸುದೇವರಿಗೆ ಜನಿಸಿದ ಮಕ್ಕಳನ್ನು ಕೊಂದು ಹಾಕುತ್ತಿದ್ದನು. ಹಾಗಾಗಿ ವಸುದೇವನು ತನ್ನ ಮಗುವನ್ನು ಗುಟ್ಟಾಗಿ ಗೋಕುಲದ ಗೊಲ್ಲರ ನಾಯಕ ನಂದನ ಮನೆಯಲ್ಲಿ ಬಿಟ್ಟನು. ಆಗ ತಾನೆ ಹುಟ್ಟಿದ ಹೆಣ್ಣು ಮಗುವನ್ನು ತಂದನು. ದುಷ್ಟ ಕಂಸ ಆ ಮಗುವನ್ನು ಕೊಲ್ಲಲು ಬಂದಾಗ ಅದು ಕೈಗೆ ಸಿಗದೆ ಗೋಕುಲದಲ್ಲಿ ಬೆಳೆಯುತ್ತಿರುವ ನಿನ್ನ ಶತ್ರುವಿನಿಂದ ನಿನ್ನ ನಾಶ ಎಂದು ಹೇಳಿ ಮಾಯವಾಯಿತು. ಇತ್ತ ನಂದ ಮತ್ತು ಯಶೋದೆ ದಂಪತಿಗಳು ಆ ಮಗುವನ್ನು ತಮ್ಮ ಮಗುವೆಂದೇ ಭಾವಿಸಿದರು. ಮುದ್ದಾಗಿ ಬೆಳೆದ ಶ್ರೀಕೃಷ್ಣನ ಬಾಲ್ಯದ ಲೀಲೆಗಳು ಅದ್ಭುತ ಮತ್ತು ಸಾಹಸಮಯವಾಗಿವೆ. ಅವುಗಳಲ್ಲಿ ಒಂದು ಯಶೋದೆ, ಬಾಲಕೃಷ್ಣನು ಮಣ್ಣು ತಿಂದನೆಂದು ತಿಳಿದು ಬಾಯಿ ತೆಗೆಯಲು ಹೇಳಲು, ಬಾಯಲ್ಲಿ ಬ್ರಹ್ಮಾಂಡವನ್ನೆ ಕಂಡು ದಿಗ್ಭ್ರಮೆಗೊಂಡಳು. ಗೋಕುಲದಲ್ಲಿ ಕೃಷ್ಣನಿಗೆ ಹಾಲುಣಿಸಲು ಬಂದ ರಾಕ್ಷಸಿ ಪೂತನಿಯನ್ನು ಕೊಂದನು. ಗೋಪಾಲಕರಿಗೆ ತೊಂದರೆ ಕೊಡುತ್ತಿದ್ದ ಕಳಿಂಗ ಸರ್ಪವನ್ನು ಮದಿಸಿದನು.

ಶ್ರೀಕೃಷ್ಣ ಯುವಕನಾಗಿ ಬೆಳೆದನು. ಇಂದ್ರನ ಪೂಜೆಯನ್ನು ತಡೆದ ಶ್ರೀಕೃಷ್ಣನಿಗೆ ಪಾಠ ಕಲಿಸಲೆಂದು ಇಂದ್ರ, ಗೋವರ್ಧನಗಿರಿಯಲ್ಲಿ ಘೋರವಾದ ಮಳೆ ಸುರಿಸಿದನು. ಆಗ ಅಲ್ಲಿನ ಜನ ಅಪಯಾಕ್ಕೊಳಗಾದರು. ಕೃಷ್ಣನು ಗೋವರ್ಧನ ಗಿರಿಯನ್ನೆ ಎತ್ತಿ ಹಿಡಿದು ಜನರನ್ನು ಮತ್ತು ಗೋವುಗಳನ್ನು ರಕ್ಷಿಸಿದನು. ಈ ರೀತಿಯ ಲೀಲೆಗಳನ್ನು ತೋರುತ್ತಾ ಕೃಷ್ಣ, ಮಾವ ಕಂಸನನ್ನು ಹುಡುಕುತ್ತ ಮಥುರೆಗೆ ಬಂದನು. ಮಥುರೆಯಲ್ಲಿ ದುಷ್ಟ ಕಂಸನನ್ನು ಸಂಹರಿಸಿ, ತನ್ನ ತಾತ ಉಗ್ರಸೇನನನ್ನು ಸಿಂಹಾಸನದ ಮೇಲೆ ಕೂರಿಸಿ ಜನರ ಮೆಚ್ಚುಗೆಗೆ ಪಾತ್ರನಾದನು.

ಶ್ರೀಕೃಷ್ಣನು ಸಾಂದೀಪಿನಿ ಮುನಿಗಳ ಬಳಿಯಲ್ಲಿ ವಿದ್ಯಾಭ್ಯಾಸ ಮಾಡಿದನು. ಆ ಸಮಯದಲ್ಲಿ ಕೃಷ್ಣ ಮತ್ತು ಬಲರಾಮರಿಗೆ ಕುಚೇಲನು ಆತ್ಮೀಯ ಸಹಪಾಠಿಯಾದನು. ವಿದ್ಯಾಭ್ಯಾಸ ಮುಗಿಸಿದ ಕೆಲವು ದಿನಗಳ ನಂತರ ಬಡ ಕುಚೇಲನು ಅವಲಕ್ಕಿಯೊಂದಿಗೆ ಕೃಷ್ಣನನ್ನು ಮತನಾಡಿಸಲು ಬಂದಾಗ, ಆತನ ಮನದಾಳದ ಇಂಗಿತವನ್ನು ಅರಿತು ಕೃಷ್ಣ ಆತನಿಗೆ ಸಹಾಯ ಮಾಡಿದನು. ಸಹೃದಯಿಯಾದ ಅವನು ಹಿಮಾಲಯದ ಪ್ರಾಂತ್ಯದಲ್ಲಿ ಜನರಿಗೆ ಹಿಂಸಿಸುತ್ತಿದ್ದ ನರಕಾಸುರನನ್ನು ವಧಿಸುವುದರ ಮೂಲಕ ನರಕ ಚತುರ್ದಶಿಯನ್ನು ಆಚರಣೆಗೆ ತಂದನು. ನಂತರ ರುಕ್ಮಿಣಿಯನ್ನು ವಿವಾಹವಾಗುವ ಮೂಲಕ ಅಧರ್ಮಿಗಳ ನಾಶಕ್ಕಾಗಿ ಅರ್ಜುನನೊಡನೆ ಸ್ನೇಹ ಬೆಳೆಸಿದನು. ಪಾಂಡವರು ವನವಾಸದಲ್ಲಿದ್ದಾಗ ಅಸಹಾಯಕ ಸ್ಥಿತಿಯಲ್ಲಿದ್ದ ದ್ರೌಪದಿಗೆ ಅಕ್ಷಯ ಪಾತ್ರೆಯನ್ನು ನೀಡಿದನು. ಜೊತೆಗೆ ದ್ರೌಪದಿಗೆ ಕೊಟ್ಟ ಮಾತಿನಂತೆ ಪಾಂಡವರ ರಾಯಭಾರಿಯಾಗಿ ಹೋಗಿ ಕೌರವರೊಡನೆ ಯುದ್ಧ ನಿಶ್ಚಯಿಸಿಕೊಂಡು ಬಂದನು. ಅಲ್ಲಿ ನಡೆದ ಹದಿನೆಂಟು ದಿನಗಳ ಕುರುಕ್ಷೇತ್ರ ಯುದ್ಧಕ್ಕೆ ಕೃಷ್ಣನು ಸೂತ್ರಧಾರಿಯಾಗಿದ್ದನು. ಆದರೆ ಯುದ್ಧದ ಸಮಯದಲ್ಲಿ ಅರ್ಜುನ ತನ್ನವರೊಡನೆ ಯುದ್ಧಕ್ಕಿಳಿಯದೆ ಹಿಂಜರಿದಾಗ, ಕರ್ತವ್ಯ ಪಾಲನೆಯ ನೀತಿ ಪಾಠವನ್ನು ಬೋಧಿಸಿ, ಯುದ್ಧ ಮಾಡಲು ಅರ್ಜುನನ್ನು ಪ್ರೇರೆಪಿಸಿದನು. ಭೀಮನಿಗೆ ಹೆದರಿ ಸರೋವರದಲ್ಲಿ ಅಡಗಿ ಕುಳಿತ ದುರ್ಯೋಧನನ್ನು ಹಿಡಿದೊಪ್ಪಿಸಿ, ಅಧರ್ಮದ ಹಾದಿ ಹಿಡಿದ ಕೌರವರ

ನಾಶಕ್ಕೆ ಮಾರ್ಗದರ್ಶನ ಮಾಡಿದನು. ಕರ್ತವ್ಯ ಪಾಲನೆಯ ಮಹತ್ವವನ್ನು ಹೊತ್ತು ಸಾರುವ 'ಭಗವದ್ಗೀತೆ'ಯ ನೀತಿ ಪಾಠವನ್ನು  ಜಗತ್ತಿಗೆ ನೀಡಿದನು. ಧರ್ಮ ರಕ್ಷಣೆಗಾಗಿ ಅವತರಿಸಿದ ಕೃಷ್ಣನು ತನ್ನ ಉದ್ದೇಶವನ್ನು ಪೂರ್ಣಗೊಳಿಸಿ ಮರದ ಕೆಳಗೆ ಮಲಗಿ ವಿಶ್ರಾಂತಿಸುವಾಗ ಬೇಡನೊಬ್ಬನ ಬಾಣಕ್ಕೆ ಗುರಿಯಾಗಿ ತನ್ನ ಪ್ರಾಣವನ್ನು ಬಿಟ್ಟನು.

ಶ್ರೀಕೃಷ್ಣನು ಧರ್ಮ 'ಎಲ್ಲಕ್ಕಿಂತ, ಎಲ್ಲರಿಗಿಂತ ದೊಡ್ಡದು. ಅಧಿಕಾರ ನಡೆಸುವವರು ಜನರ ಹಿತಕ್ಕಾಗಿ ಬದುಕಬೇಕು' ಎಂದು ಹೇಳುವ ಮೂಲಕ ಮನು ಸಂಕುಲಕ್ಕೆ ದಾರಿದೀಪವಾಗಿದ್ದಾರೆ.